ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1522
2.	ಸದಸ್ಯರ ಹೆಸರು	:	ಶ್ರೀ ಎಸ್.ಅಪ್ಪಾಜಿಗೌಡ
3.	ಉತ್ತರಿಸಬೇಕಾದ ದಿನಾಂಕ	:	19-03-2020
4.	ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹೇಮಾವತಿ ಜಲಾಶಯದಿಂದ ನಾಗಮಂಗಲ ತಾಲ್ಲೂಕಿಗೆ ನೀರಾವರಿ ಸೌಲಭ್ಯಗಳು ಮಂಜೂರಾಗಿರುವುದು ಯಾವಾಗ ; ಕಾರ್ಯರಂಭವಾಗಿದ್ದು ಯಾವಾಗ ;	ಹೇಮಾವತಿ ಜಲಾಶಯದ ಹೇಮಾವತಿ ಎಡದಂಡೆ ನಾಲೆ ಸರಪಳಿ 183.42 ಕಿ.ಮೀ ರಿಂದ 214.30 ಕಿ.ಮೀ ನಲ್ಲಿ ಬರುವ ನಾಲೆಯ ಭಾಗ ಹಾಗೂ ನಾಗಮಂಗಲ ಶಾಖಾ ನಾಲೆ ಸರಪಳಿ 50.00 ಕಿ.ಮೀ ರಿಂದ 78.325 ಕಿ.ಮೀ ನಲ್ಲಿ ಬರುವ ನಾಲೆಯ ಭಾಗ ನಾಗಮಂಗಲ ತಾಲ್ಲೂಕಿನ ಅಚ್ಚುಕಟ್ಟಿಗೆ ಒಳಪಡುತ್ತದೆ. ಹೇಮಾವತಿ ಎಡದಂಡೆ ನಾಲೆಯು 1967ನೇ ಸಾಲಿನಲ್ಲಿ ಹಾಗೂ ನಾಗಮಂಗಲ ಶಾಖಾ ನಾಲೆಯು 1985-86 ನೇ ಸಾಲಿನಲ್ಲಿ ಮಂಜೂರಾಗಿದೆ. ಹೇಮಾವತಿ ಎಡದಂಡೆ ನಾಲೆಯಲ್ಲಿ ನಾಗಮಂಗಲ ಭಾಗಕ್ಕೆ 2002 ನೇ ಸಾಲಿನಿಂದ ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 2000 ನೇ ಸಾಲಿನಿಂದ ನೀರನ್ನು ಹರಿಸಲಾಗುತ್ತಿದೆ.
ಆ	ನಾಗಮಂಗಲ ತಾಲ್ಲೂಕಿಗೆ ಎಷ್ಟು ಅಚ್ಚುಕಟ್ಟು ಪ್ರದೇಶವನ್ನು ಮಂಜೂರು ಮಾಡಲಾಗಿತ್ತು ; ಈ ಪೈಕಿ ಇದುವರೆಗೂ ಎಷ್ಟು ಪ್ರದೇಶವನ್ನು ಅಭಿವೃದ್ಧಿ ಮಾಡಲಾಗಿದೆ ;	ನಾಗಮಂಗಲ ತಾಲ್ಲೂಕಿಗೆ ಒಳಪಡುವ ಅಚ್ಚುಕಟ್ಟಿನ ವಿವರ ಈ ಕೆಳಕಂಡಂತಿದೆ :

ಕ್ರ ಸಂ.	ನಾಲೆ ವಿವರಗಳು	ಯೋಜಿತ ಅಚ್ಚುಕಟ್ಟು ಪ್ರದೇಶ (ಎಕರೆಗಳಲ್ಲಿ)	ಅಭಿವೃದ್ಧಿ ಪಡಿಸಿದ ಅಚ್ಚುಕಟ್ಟು ಪ್ರದೇಶ (ಎಕರೆಗಳಲ್ಲಿ)
1.	ಹೇಮಾವತಿ ಎಡದಂಡೆ ನಾಲೆ	42,313.00	42,313.00
2.	ನಾಗಮಂಗಲ ಶಾಖಾ ನಾಲೆ	60,861.69	56,746.46
	ಒಟ್ಟು :-	**1,03,174.69**	**99,059.46**

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಇ	ಯೋಜನೆ ಮಂಜೂರಾದಾಗ ಎಷ್ಟು ಕಾಲಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ನಿಗದಿಯಾಗಿತ್ತು ;	ಯೋಜನೆಯು ಮಂಜೂರಾದಾಗ 5 ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ನಿಗದಿಯಾಗಿತ್ತು.
ಈ	ಅಚ್ಚುಕಟ್ಟು ಪ್ರದೇಶದ ಎಷ್ಟು ಭಾಗ ಕೆರೆಯ ಅಚ್ಚುಕಟ್ಟಿಗೆ ಸೇರುತ್ತದೆ ; ಹೊಸ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು;	ಹೇಮಾವತಿ ಅಚ್ಚುಕಟ್ಟು ಪ್ರದೇಶದಲ್ಲಿ ಕೆರೆಗಳ ಅಚ್ಚುಕಟ್ಟು ಸೇರಿರುವುದಿಲ್ಲ.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಉ	ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು (ಕಾರ್ಯಗತ ಮಾಡಲು) ಸರ್ಕಾರದ ಅನುದಾನ ಸಕಾಲಿಕವಾಗಿ ದೊರಕಿದೆಯೇ ;	ಸಕಾಲಿಕವಾಗಿ ಅನುದಾನ ಒದಗಿಸಲಾಗಿದೆ.
ಊ	ಯೋಜನೆಯನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ ಹಾಗೂ ಕಾಲಮಿತಿ ಎಷ್ಟು ಹಿಡಿಯುತ್ತದೆ ;	ಹೇಮಾವತಿ ಎಡದಂಡೆ ನಾಲೆ ಕಾಮಗಾರಿಗಳು ಪೂರ್ಣಗೊಂಡಿದೆ. ನಾಗಮಂಗಲ ಶಾಖಾ ನಾಲೆಗೆ ರೂ.50.00 ಕೋಟಿ ಅನುದಾನ ಬೇಕಾಗಿದ್ದು, ಅನುದಾನದ ಲಭ್ಯತೆಯ ಮೇರೆಗೆ ಯೋಜನೆಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.
ಋ	ಎಷ್ಟು ಕಾಲಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರ ತೀರ್ಮಾನಿಸಿದೆ;	
ಎ	ಅಚ್ಚುಕಟ್ಟು ಕೆರೆಗಳ ಹೂಳು ತೆಗೆಯುವ ಮತ್ತು ಒತ್ತುವರಿಯನ್ನು ತೆರವುಗೊಳಿಸುವ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡಿದೆಯೇ ;	ಅಚ್ಚುಕಟ್ಟು ಕೆರೆಗಳ ಹೂಳು ತೆಗೆಯುವ ಮತ್ತು ಒತ್ತುವರಿಯನ್ನು ತೆರವುಗೊಳಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ನಾಗಮಂಗಲ ತಾಲ್ಲೂಕಿನಡಿ ಒಟ್ಟು 98 ಕೆರೆಗಳು ಇರುತ್ತವೆ. ಇವುಗಳಲ್ಲಿ, ಈವರೆಗೆ ಒಟ್ಟು 21 ಕೆರೆಗಳ ಹೂಳು ತೆಗೆಯಲಾಗಿದ್ದು, 7 ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ.
ಏ	ಇದುವರೆಗೆ ಆಗಿರುವ ಕಾಮಗಾರಿಗಳು ದೋಷಪೂರಿತವಾಗಿದೆ ಎಂಬ ದೂರುಗಳನ್ನು ರೈತರು ಪದೇ ಪದೇ ಅಧಿಕಾರಿಗಳ ಗಮನಕ್ಕೆ ತಂದಿರುವುದು ನಿಜವೇ ; ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವ ವಿಧವಾದ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ?	ಇದುವರೆಗೆ ಆಗಿರುವ ಕಾಮಗಾರಿಗಳು ದೋಷಪೂರಿತವಾಗಿರುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

ಸಂಖ್ಯೆ:ಜಸಂಇ 49 ಎಸ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು